# ಮಳೆ ಬರುವ ಕಾಲಕ್ಕ...

**ಬಿರುಬೇಗೆಯಿಂದ ಬೆಂದ ಭೂತಾಯಿಯ ಮೈ ಮೊದಲ ಮಳೆಗೆ ನೆನೆದು ಅರಳಿದಾಗ ಸೂಸುತ್ತಿದ್ದ ಮಣ್ಣಿನ ವಿಶಿಷ್ಟ ಪರಿಮಳಕ್ಕೆ ಮನಸೋತು ಮೂಗರಳಿಸಿ ಘಮ ಹೀರಿದೆ. ಕಿಟಕಿಯ ಸರಳಿಗೆ ಮುಖ ಒತ್ತಿ ನಿಂತಾಗ ಮನದ ಒಳಗೂ ನೆನಪಿನ ಸುರಿಮಳೆ...**

**■ ಲತಾ ಹೆಗಡೆ**

ಮಳೆ ಬರುವ ಕಾಲಕ್ಕ ಒಳಗ್ಯಾಕ ಕುಂತೇವೋ
ಇಳೆಯೊಡನೆ ಜಳಕ ಮಾಡೋಣ
ನಾವೂನು ಮೋಡಗಳ ಆಟ ಆಡೋಣ...

ಕಿಟಕಿಯ ಮೇಲಿಟ್ಟ ಬಾನುಲಿಯಿಂದ ಅಲೆಅಲೆಯಾಗಿ ತೇಲಿಬಂದ ಬೇಂದ್ರೆ ಅಜ್ಜನ ಕವನ ಮೈಮನವನ್ನಾವರಿಸಿದಾಗ ಭಾವಾವೇಶಕ್ಕೊಳಗಾಗಿದ್ದೆ. ಹತ್ತು ಗುಣಿಲೆ ಎಂಟಡಿಯ ಗಾಳಿ–ಬೆಳಕಿಲ್ಲದ ಪುಟ್ಟ ಅಡುಗೆಮನೆಯಲ್ಲಿ ಬೇಯಿಸುತ್ತಿದ್ದ ಕೂಳಿನ ತಾಪ, ಏಕತಾನತೆಯ ದಿನಚರಿ; ಬಿರು ಬೇಗೆಯ ಝಳದೊಟ್ಟಿಗೆ ಬೆಂದು ಬಸವಳಿದ ತನುಮನ ತುಂತುರಿನ ಸಿಂಚನಕ್ಕೆ ಹಾತೊರೆದದ್ದು ಹೌದು. ಅಪ್ರಯತ್ನವಾಗಿಯೇ ಥಟ್ಟನೆ ನೋಟ ಕಿಟಕಿಯೆಡೆ ಹೊರಳಿತ್ತು. ಕಂಡದ್ದು ನೆರೆಮನೆಯ ಅರ್ಧಮಾರಷ್ಟೇ ಆಚೆಯಿದ್ದ ಸಿಪ್ಪೆ ಸುಲಿದ ಬಣ್ಣಗೆಟ್ಟ ಗೋಡೆ! ಬಿಸಿಲಿಗೆ ಒಣಗಿ ಮುಟ್ಟಿದರೆಲ್ಲಿ ಉದುರಿ ಬೀಳುತ್ತದೋ ಎಂಬಂತಿದ್ದ ಸುಣ್ಣದ ಪದರ ಕಣ್ಣಿಗೆ ರಾಚಿ ಕಾಂಕ್ರೀಟ್ ಜಗದ ಕಟು ವಾಸ್ತವಕ್ಕೆ ಕ್ಷಣಕಾಲ ಪಿಚ್ಚೆನಿಸಿದರೂ ಸಾಲುಗಳ ಭಾವಮಾಧುರ್ಯದ ಮೋಡಿಗೊಳಗಾಗಿ ಮನದ ಹೆಬ್ಬಾಗಿಲನ್ನು ತೆರೆದವಳೇ ಸುಂದರ ಬಾಲ್ಯದ ಕೋಣೆಯ ಕದ ದೂಡಿ ಒಳ ಹೊಕ್ಕೆ.

ದಶಕಗಳ ಹಿಂದೆ ಬೆಂದಕಾಳೂರಿನ ಗುಡ್ಡದಾಸ್ಪತ್ರೆಯೆಂದೇ ಚಾಲ್ತಿಯಲ್ಲಿದ್ದ ಅದೊಂದು ಆಸ್ಪತ್ರೆಯ ಟೇಬಲ್ಲಿನಲ್ಲಿ ನೋವಿನಿಂದ ಮುಲುಗುತ್ತಿದ್ದ ಆಯಿಯ ದುರ್ಬಲಗೊಂಡಿದ್ದ ಗರ್ಭದಿಂದ ದಾದಿಯ ಕೈಗೆ ಬೀಳುತ್ತಲೇ ಆಸ್ಪತ್ರೆಯ ಸೂರು ಹಾರಿ ಹೋಗುವಷ್ಟು ಜೋರಾಗಿ ಅತ್ತಿದ್ದೆನಂತೆ! ಬ್ಲೀಡಿಂಗ್ ಹೆಚ್ಚಾಗಿ ಆಯಿ ಮೂರ್ಛೆ ತಪ್ಪಿದ್ದರೂ ನನ್ನ ಕಿರುಚುವಿಕೆಗೆ ಹೆದರಿಯೇ ಪ್ರಜ್ಞೆ ತಪ್ಪಿದ್ದು ಎಂದು ನಂತರದಲ್ಲಿ ಒಡಹುಟ್ಟಿದವರೊಂದಿಗೆ ಕಾಲುಕೆರೆದು ಜಗಳಕ್ಕಿಳಿದು ಜೋರು ಧ್ವನಿಯಲ್ಲಿ ಅರಚುತ್ತಲೇ ಅತ್ತಾಗಲೆಲ್ಲಾ ಆಯಿ ಕುಶಾಲು ಮಾಡುವುದಿತ್ತು.

ರಾಜಾಜಿನಗರದ ಹೌಸಿಂಗ್ ಬೋರ್ಡ್‌ನ ಆ ಪುಟ್ಟ ಮನೆಯ ತುಂಬು ಕುಟುಂಬದ ಸದಸ್ಯರಲ್ಲಿ ಅತೀ ಕಿರಿಯಳೆಂದೋ ಏನೋ ಮುದ್ದಿನ ಕೂಸಾಗಿ ಮೊದ್ದಾಗಿದ್ದೆ! ಅಣ್ಣಂದಿರಂತೂ 'ಇವಳು ಮುದ್ದುಮಣಿಯಲ್ಲ ಬರೀ ಮೊದ್ದುಮಣಿ' ಎಂದೇ ಸುಮ್ಮನೆ ತಲೆಗೆ ಮೊಟಕುತ್ತಾ ಚಾಳಿಸುತ್ತಿದ್ದರು. ಇನ್ನು ಅಕ್ಕನೋ ಗೋವು! ಓದು, ಮನೆಗೆಲಸ ಸಾಲದೆಂಬಂತೆ ನನ್ನ ಜಡೆ–ಜುಟ್ಟು, ಮುಖದ ಅಲಂಕಾರದ ದೇಖರಿಕೆ ಅವಳದ್ದೇ. ಅವಳ ಗೊಂಬೆಯಾಟದ ತುಡಿತಕ್ಕೆ ನಾನೊಂದು ಜೀವಂತ ಗೊಂಬೆ.

ಶಾಲೆಗೆ ಹೋಗುವಾಗ ಮೆಟ್ಟಿಲಲ್ಲಿ ಕುಳಿತು ಎರಡು ಕಾಲುಗಳ ಮಧ್ಯೆ ಕೆಳಗಿನ ಮೆಟ್ಟಿಲಲ್ಲಿ ಕೂಡಿಸಿಕೊಂಡು ಕಾಲುಗಳನ್ನು ಇಕ್ಕಳವಾಗಿಸಿ ಒತ್ತಿ ಹಿಡಿದು ಪಟ್ಟಾಗಿ ಕೂತ ಖದರ್‌ಗೆ ಬಿಡಿಸಿಕೊಂಡು ಓಡುವುದಿರಲಿ, ಮಿಸುಕುವುದೂ ಅಸಾಧ್ಯವೆನ್ನಿಸಿ ಮುದುರಿ ಕೂತು ಕುನ್ನೀಮರಿಯಾದ ನನಗೋ ಶರಣಾಗತಿಯೇ ಗತಿಯಾಗಿತ್ತು. ಪೌಡರ್ ಮೆತ್ತಿ ಬೊಟ್ಟಿಟ್ಟು ಇರದ ಹುಬ್ಬನ್ನು ಕಾಡಿಗೆ ಪೆನ್ಸಿಲ್ಲಿನಿಂದ ಕಮಾನಾಗಿಸಿ, ಕಣ್ಣಿಗೆ ಕಾಡಿಗೆ ಬಳಿದು ಎರಡು ಜಡೆ ಹೆಣೆದು ಹೂ ಮುಡಿಸಿ ಮುಖವನ್ನು ಎಲ್ಲಾ ಕೋನಗಳಿಗೂ ತಿರುಗಿಸಿ ಬಗ್ಗೀ ಬಗ್ಗಿ ನೋಡಿ ಸಮಾಧಾನಗೊಂಡ ನಂತರವಷ್ಟೇ ಕಾಲುಗಳ ಸೆರೆಯಿಂದ ಬಿಡುಗಡೆ! ಎಣ್ಣೆ ಪೂಸಿದ್ದ ಕೂದಲನ್ನು ತಿದ್ದಿ ತೀಡಿ ಬಾಚುವಾಗ ಹೇನು, ಸೀರೇನಾದರೂ ಕಂಡಿತೋ ಕೆಲಸ ಕೆಟ್ಟಿತೆಂದೇ ಅರ್ಥ, ಉಗುರಿನ ಮಧ್ಯೆ ಚಟ್ಟೆನ್ನಿಸುವುದರಲ್ಲಿ ನಿರತಳಾಗಿಬಿಡುತ್ತಿದ್ದಳು. ಸಮಯದ ಚೌಕಟ್ಟೇ ಇರುತ್ತಿರಲಿಲ್ಲ. ನಾನೋ ತಲೆ ಅಲುಗಿಸಿ ಅಸಮಾಧಾನ ತೋರುತ್ತಿದ್ದೆ. ಆಗೆಲ್ಲಾ ಬಾಚಣಿಗೆಯಿಂದ ತಲೆಗೊಂದು ಛಟ್ಟನೆ ಮೊಟಕು.




ಇನ್ನು ಭಾನುವಾರದ ತಲೆಸ್ನಾನದ ಸಂಭ್ರಮಕ್ಕೆ ಆಯಿಯೇ ಸಾರಥಿ. ಅಂದೇನಾದರೂ ಅವಳು ತುಂಬಿದ ಮನೆಯ ಒಳಜಗಳಗಳಿಂದ ಧುಮುಗುಟ್ಟುತ್ತಿದ್ದರಂತೂ ಗ್ರಹಚಾರ ಕೆಟ್ಟಿತೆಂದೇ

